ಮಾಡಿಕೊಂಡು ಬಂದು ಮನೆಯ ಮುಂದೆ ನಿಲ್ಲಿಸಿ ಕೆಳಗಿಳಿದ.

'ಇವ್ನು ಬದ್ರಿ ಅಂತ....ನನ್ನ ಅಸಿಸ್ಟೆಂಟ್, ವೆರಿ ಕ್ಲೆವರ್...'.

ತನ್ನನ್ನು ಪರಿಚಯಿಸಿದಾಗ ಅವನು ಕೈ ಮುಗಿದ. ಅವನೊಬ್ಬ ರೌಡಿಯಂತೆ ಕಂಡರೂ ಮುಖ ಸೌಮ್ಯವಾಗಿತ್ತು.

'ಬದ್ರಿ....ಇವ್ರನ್ನು ಎಲ್ಲಿಂದ ಪಿಕಪ್ ಮಾಡಿದ್ಯೋ ಅಲ್ಲೇ ಡ್ರಾಪ್ ಮಾಡಿ ಬಿಡು....ಉಳಿದದ್ದೆಲ್ಲಾ ಮತ್ತೆ ಮಾತನಾಡೋಣ...'

ಹೇಮಂತನ ಮಾತಿಗೆ ತಲೆಯಾಡಿಸಿದನಾತ.

ಮತ್ತೆ ಅರ್ಧ ಗಂಟೆಯೊಳಗೆ ಅವರು ದರ್ಶಿನಿಯ ಮುಂದಿದ್ದರು.

'ಋತು ಮೇಡಂ, ನಿಮ್ಮನ್ನು ಹಾಗೆ ಕರ್ಕೊಂಡು ಹೋಗಿದ್ದಕ್ಕೆ ಬೇಜಾರಾಗ್ತಿದೆ, ಎನಿ ಹೌ ಕಂಗ್ರಾಟ್ಸ್, ನನ್ನನ್ನು ನಿಮ್ಮ ಅಣ್ಣನೆಂದೇ ತಿಳ್ಕೊಂಡು ಬಿಡಿ....ನಾನು, ಹೇಮಂತ್, ಸತ್ಯ ಎಲ್ಲಾ ಬೆಸ್ಟ್ ಫ್ರೆಂಡ್ಸ್, ಹೇಮಂತ್ ಸರ್‌ಗೆ ನೀವು ಸರಿಯಾದ ಜೋಡಿ....' ಅವನು ಹೊಗಳಿದಾಗ ನಸುನಗು ಬೀರಿದಳು.

ಅಷ್ಟರಲ್ಲಿ ಬಿಸಿಲಿಳಿಯತೊಡಗಿತ್ತು.

'ಅಂತೂ ಒಂದು ಸಸ್ಪೆನ್ಸ್ ಮೂವಿಯಲ್ಲಿ ಆಕ್ಟ್ ಮಾಡಿದಂತಾಯ್ತು ನೋಡು ಋತು ಇವತ್ತು. ನಾವು ಕಿಡ್ನ್ಯಾಪ್ ಆಗಿದ್ದೇವೆಂದುಕೊಂಡಾಗಿನ ಆ ಭಯ, ಆ ಆತಂಕವನ್ನು ನಾವ್ಯಾವತ್ತೂ ಮರೆಯೋ ಹಾಗಿಲ್ಲ, ಅಂತೂ ತನ್ನ ಪತ್ತೇದಾರಿಕೆಗೆ ಸರಿಹೊಂದುವ ಹಾಗೆಯೇ ತನ್ನ ಹುಡುಗಿಯನ್ನು ಮೀಟ್ ಮಾಡಿಬಿಟ್ಟ ಹೇಮಂತ...' ರಮ್ಯ ಹೇಮಂತನನ್ನು ಮನಸಾರೆ ಹೊಗಳಿದಾಗ ತಮ್ಮಿಬ್ಬರ ಮೊದಲ ಮಿಲನದ ಖುಷಿಯಲ್ಲೇ ರಂಗೇರಿದಳು ಋತು.

ಗೆಳತಿಯನ್ನು ಪಿಜಿಯ ಮುಂದೆ ಇಳಿಸಿ, ಚಿಕ್ಕಮ್ಮನಿಗೆ ಇಷ್ಟವೆಂದು ಪೇಡಾವನ್ನು ಖರೀದಿಸಿ ಋತು ಬಂಗಲೆಯನ್ನು ತಲುಪುವಷ್ಟು ಹೊತ್ತಿಗೆ ಕತ್ತಲಾವರಿಸತೊಡಗಿತ್ತು.

ಗಾಡಿಯನ್ನು ಪಾರ್ಕ್ ಮಾಡಿ ಪ್ರೇಮಗೀತೆಯೊಂದನ್ನು ಗುನುಗಿಕೊಳ್ಳುತ್ತಾ ಹೊರಬರುವಾಗ ವಾಚ್‌ಮನ್ ಚಂದ್ರಪ್ಪ ದಾರಿಗಡ್ಡ ಬಂದಿದ್ದ. ಆ ನಸುಗತ್ತಲೆಯಲ್ಲಿ ಅವನ ಮುಖ ಮತ್ತಷ್ಟು ವಿಕಾರವಾಗಿ ಕಂಡಿತು ಅವಳಿಗೆ.

'ಏನು ಋತು, ಪ್ರೇಮಗೀತೆ ಇಂಪಾಗಿಯೇ ಕೇಳ್ತಿದೆ, ಇಂಥ ಯಾವ ಪ್ರೇಮಗೀತೆಗಳೂ ಈ ಕೋಟೆ ಬಂಗಲೆಗೆ ಒಳ್ಳೆಯದನ್ನು ಮಾಡಿಲ್ಲ ನೆನಪಿರ್ಲಿ. ನೀನು ಮೊದ್ಲು ಹೇಗಿದ್ಯೋ ಹಾಗೆಯೇ ಇದ್ದು ಬಿಡು, ಪ್ರೀತಿ, ಪ್ರೇಮ ಅಂತೆಲ್ಲಾ ಹೋದ್ಯೋ ಈ ಕೋಟೆ ಬಂಗಲೆಯ ಒಂದೊಂದು ಕಲ್ಲುಗಳೂ ನೆಲಕ್ಕುರುಳಿ ಬಂಗಲೆಯೇ ಸಮಾಧಿಯಾಗಿ ಬಿಡುತ್ತೆ...ಜಾಗ್ರತೆ' ಅವನ ಗಡಸು ಧ್ವನಿಗೆ ಬೆಚ್ಚಿದಳು. ಇವನು ತನ್ನನ್ನು ಬೆದರಿಸುತ್ತಿದ್ದಾನೆಯೇ? ತಾನು ಪ್ರೀತಿಯಲ್ಲಿ ಸಿಲುಕದೆ ಮೊದಲಿನ ಹಾಗೆಯೇ ಇರಬೇಕೆಂದರೆ ಏನರ್ಥ? ತನ್ನ ಪ್ರೀತಿಗೂ, ಬಂಗಲೆಯ ಸಮಾಧಿಗೂ ಎಲ್ಲಿಂದೆಲ್ಲಿಯ ಸಂಬಂಧ...? ತಲೆ ಕೊಡವಿದಳು.

'ಚಂದ್ರಪ್ಪ, ಅದೇನು ಹೇಳಬೇಕೂಂತಿದ್ದಿಯೋ ಸ್ಪಷ್ಟವಾಗಿ ಹೇಳು...' ಕಂಪಿಸುವ ಧ್ವನಿಯಲ್ಲಿ ಹೇಳಿದಳು.

'ನಾನು ಹೇಳುವುದೇ ಹೀಗೆ, ಅರ್ಥ ಮಾಡಿಕೊಂಡ್ರೆ ಜಾಣೆಯಾಗ್ತಿ..' ಎಂದವನು ಮತ್ತೆ ಮಾತಿಗೆ ಅವಕಾಶ ನೀಡದೆ ಗೇಟಿನತ್ತ ನಡೆದು ಹೋದಾಗ ಮೆಲ್ಲನೆ ಕಂಪಿಸಿದಳು. ಒಂದು ವೇಳೆ ತಾನು ಹೇಮಂತನನ್ನು ಭೇಟಿಯಾಗಿ ಬಂದಿರುವ ವಿಷಯ ಇವನಿಗೆ ತಿಳಿದಿರಬಹುದೇ?....ಸಂದೇಹ ಇಣುಕಿತು. ಆದರೆ ಇದು ಹೇಗೆ ಸಾಧ್ಯ? ತಾನು ಬರುವಾಗ ಇವನು ಇಲ್ಲಿಯೇ ಇದ್ದನಲ್ಲವೇ?....ಯಾಕೋ ಎಲ್ಲವೂ ಅಸ್ಪಷ್ಟವೆನಿಸಿತು. ಬೆಳಿಗ್ಗೆ ಸುಂದರಿಯನ್ನು ತಾನಾಗಿಯೇ ಮಾತನಾಡಿಸಿದರೂ ತನ್ನನ್ನು ತೀಕ್ಷ್ಣವಾಗಿ ನೋಡಿ ಹೊರಟು ಹೋಗಿದ್ದಳು. ಈಗ ಈ ಚಂದ್ರಪ್ಪ ತನ್ನನ್ನು ಬೆದರಿಸುತ್ತಿದ್ದಾನೆ....ಏಕೋ ಗಂಡ ಹೆಂಡತಿ ನಿಗೂಢತೆಯ ಹುತ್ತವಾಗಿದ್ದಾರೆನಿಸಿತು ಅವಳಿಗೆ.

ಅವಳು ತಲೆ ಬಾಗಿಲಿಗೆ ಬರುವಷ್ಟರಲ್ಲಿ ಕಲಾವತಿ ಬಂಗಲೆಯ ಎಲ್ಲ ದೀಪಗಳನ್ನು ಬೆಳಗಿಸಲು ಆರಂಭಿಸಿದ್ದರು. ಪ್ರತಿದಿನವೂ ಅರ್ಧಗಂಟೆಗಳ ಕಾಲ ಬಂಗಲೆಯ ಎಲ್ಲ ದೀಪಗಳನ್ನು ಬೆಳಗಿಸುವುದು ಕಲಾವತಿಯ ಪದ್ಧತಿ.

'ಏನು ಚಿಕ್ಕಮ್ಮ, ನಮ್ಮ ಕೋಟೆ ಬಂಗ್ಲೆಯನ್ನೇನು ಮೈಸೂರು ಮಹಾರಾಜರ ಅರಮನೆ ಅಂತ ಅಂದುಕೊಂಡಿದ್ಯಾ ನೀನು....' ಆಗಾಗ ಋತು ಛೇಡಿಸಿದರೆ 'ಹೌದು ಋತು, ಇದು ಅರಮನೇನೇ, ಋತು ಎನ್ನುವ ರಾಜಕುಮಾರಿ ಇರುವ ಅರಮನೆ ಇದು' ಎನ್ನುತ್ತಾರೆ ಕಲಾವತಿ.

ಈ ದಿನವೂ ದೀಪಗಳ ಬೆಳಕಿನಲ್ಲಿ ಕೋಟೆ ಬಂಗಲೆ ಝಗಮಗಿಸತೊಡಗಿದಾಗ ಋತುವಿನ ಮನಸ್ಸು ಅರಳಿತು. ಈ ದಿನ ತನ್ನ, ಹೇಮಂತನ ಪ್ರೀತಿಯ ವಿಷಯವನ್ನು ಹೇಳಿಬಿಡಬೇಕೆಂದು ತೀರ್ಮಾನಿಸಿಯೇ ಬಂಗಲೆಯೊಳಗೆ ಅಡಿಯಿಟ್ಟಳು. ಕಲಾವತಿ ದೇವರ ದೀಪ ಹಚ್ಚಿ ಊದುಬತ್ತಿ ಹೊತ್ತಿಸಿಟ್ಟಿದ್ದರಿಂದ ಬಂಗಲೆ ಪೂರ್ತಿ ಗಂಧದ ಪರಿಮಳದಿಂದ ತುಂಬಿ ಹೋಗಿತ್ತು.

ಒಳಬಂದ ಋತುವನ್ನು ಕಲಾವತಿಯ ಆತಂಕ ತುಂಬಿದ ಮುಖ ಸ್ವಾಗತಿಸಿತು.

'ಋತು....ಯಾಕಿಷ್ಟು ತಡ ಮಾಡ್ಬಿಟ್ಟೆ, ನಂಗೆಷ್ಟು ಭಯವಾಗಿತ್ತು ಗೊತ್ತಾ?....ನಿನ್ನ ಮೊಬೈಲಿಗೆ ಎಷ್ಟು ಕಾಲ್ ಮಾಡಿದ್ರೂ ನೀನು ಉತ್ತರಿಸ್ಲಿಲ್ಲ.. ..ನಿಮ್ಮಪ್ಪ ಬೇರೆ ಇನ್ನೂ ಬಂಗಲೆಗೆ ಬಂದಿಲ್ಲ....ನಿನ್ನ ಬಗ್ಗೆ ನಾನೆಷ್ಟು ಹೆದರಿದ್ದೆ ಗೊತ್ತಾ?....ನಿನ್ನನ್ನು ಯಾರೋ ಫಾಲೋ ಮಾಡ್ತಿದ್ದಾರೆ ಎಂದು ತಿಳಿದ ಮೇಲೂ ನೀನು ಹೀಗೆ ತಡ ಮಾಡೋದು ಸರೀನಾ?'

ಕಲಾವತಿ ಆಕ್ಷೇಪಿಸಿದರೂ ಆ ಆಕ್ಷೇಪಣೆಯಲ್ಲಿ ಕಾಳಜಿ ಇರುವುದನ್ನು ಗಮನಿಸಿದ ಋತು ನಸುನಕ್ಕಳು. ಕಾಲೇಜಿನಲ್ಲಿದ್ದಾಗ ಮೊಬೈಲನ್ನು ಸೈಲೆಂಟ್ ಮೋಡಿನಲ್ಲಿಟ್ಟಿದ್ದಳು. ಅದನ್ನು ಮತ್ತೆ ಗಮನಿಸಿಯೇ ಇರಲಿಲ್ಲ.

'ಚಿಕ್ಕಮ್ಮ....ಸಮಾಧಾನ. ನೀನು ಭಯಪಡುವಂತಹುದು ಏನೂ ಆಗಿಲ್ಲ. ನಾನು ನಿನಗೊಂದು ಸಿಹಿಸುದ್ದಿ ಹೇಳೋದಿದೆ, ಇರು ಈಗ ಬರ್ತೀನಿ..' ಎಂದವಳು ಪೇಡಾದ ಕವರನ್ನು ಡೈನಿಂಗ್ ಟೇಬಲ್ಲಿನ ಮೇಲಿರಿಸಿ ಮಹಡಿಯೇರಿ ತನ್ನ ರೂಮಿಗೆ ಹೋದವಳು ಮುಖ ತೊಳೆದು ಸೀರೆ ಬದಲಿಸಿ ತನಗೆ ಆರಾಮವೆನಿಸುವ ಸಡಿಲವಾದ ಕುರ್ತಾವೊಂದನ್ನು ಧರಿಸಿಕೊಂಡು ಕೆಳಗಿಳಿದು ಬಂದಳು.

**ಚಿಕ್ಕಮ್ಮನಿಗೆ ಸಿಹಿಸುದ್ದಿ**

ಅಷ್ಟರಲ್ಲಿ ಕಲಾವತಿಯೂ ಋತುವಿಗೆ ಟೀ ಮಾಡಿಕೊಂಡು ಜೊತೆಗೊಂದಿಷ್ಟು ಬಿಸ್ಕತ್ತುಗಳನ್ನು ತೆಗೆದುಕೊಂಡು ಬಂದಿದ್ದರು.

'ಈಗ ಹೇಳು ಋತು, ಏನಂಥಾ ಸಿಹಿ ಸುದ್ದಿ?' ಟೀ ಕಪ್ಪನ್ನು ಅವಳ ಕೈಗಿಡುತ್ತಾ ಕೇಳಿದರು.

## ಇಲ್ಲಿಯವರೆಗೆ



ಪ್ರಿನ್ಸಿಪಾಲ್ ಭುವನೇಶ್ವರಿ ಋತುವನ್ನು ತಮ್ಮ ಚೇಂಬರಿಗೆ ಕರೆಸುತ್ತಾರೆ. ಪ್ರಶಾಂತನ ಕೊಲೆಯ ತನಿಖೆ ಆರಂಭವಾಗಬೇಕಿದೆ. ಅದರ ಹೊಣೆಯನ್ನು ಪ್ರೈವೇಟ್ ಡಿಟೆಕ್ಟಿವ್‌ಗೆ ವಹಿಸಿದ್ದೇವೆ ಎಂದು ಹೇಳಿ ಅಲ್ಲೇ ಕುಳಿತಿದ್ದ ಕುಮಾರ್ ಎಂಬ ವ್ಯಕ್ತಿಯನ್ನು ಋತುವಿಗೆ ಪರಿಚಯಿಸುತ್ತಾರೆ. ಮಧ್ಯಾಹ್ನ ಮೀಟಿಂಗ್ ಇಟ್ಟುಕೊಂಡು ಈ ಬಗ್ಗೆ ಚರ್ಚಿಸೋಣ ಎಂದು ಪ್ರಿನ್ಸಿಪಾಲ್ ಹೇಳುತ್ತಾರೆ. ಋತು, ರಮ್ಯ ಇಬ್ಬರೂ ಹೊಟ್ಟೆ ಹಸಿವು ಎಂದು ಕಾಲೇಜು ಪಕ್ಕದಲ್ಲೇ ಇದ್ದ ದರ್ಶಿನಿಯೊಂದಕ್ಕೆ ಹೋಗಿ ಊಟ ಮಾಡಿ ವಾಪಸ್ ಕಾಲೇಜಿಗೆ ನಡೆದುಕೊಂಡು ಬರುವಾಗ ಕಾರೊಂದು ಬಂದು ದಾಂಡಿಗರಿಬ್ಬರು ಇವರಿಬ್ಬರನ್ನೂ ಹತ್ತಿಸಿಕೊಂಡು ದೂರದ ಬಂಗಲೆಯೊಂದರ ಬಳಿ ಕರೆ ತರುತ್ತಾರೆ. ಅಪಹರಣವಾದ ಸಂಗತಿ ತಿಳಿದ ಕೂಡಲೇ ಇಬ್ಬರೂ ಗಾಬರಿಯಾಗುತ್ತಾರೆ. ಬಂಗಲೆಯಲ್ಲಿ ದಡೂತಿ ಹೆಂಗಸೊಬ್ಬಳು ಇಬ್ಬರನ್ನೂ ಸ್ವಾಗತಿಸುತ್ತಾಳೆ. ಕಾಲೇಜಿನಲ್ಲಿ ಕುಮಾರ್ ಎಂದು ಪರಿಚಯಿಸಿಕೊಂಡ ವ್ಯಕ್ತಿಯನ್ನು ಅಲ್ಲಿ ನೋಡಿದ ಋತುವಿಗೆ ಅಚ್ಚರಿಯಾಗುತ್ತದೆ. ಈತ ಕುಮಾರ್ ಅಲ್ಲ ಹೇಮಂತ ಎಂಬುದು ದೃಢವಾಗುತ್ತದೆ.